13/2/14 VIJAYA VANI

# ವಿದ್ಯುತ್ ಸಂಪರ್ಕಕ್ಕೆ ಆನ್‌ಲೈನ್ ವ್ಯವಸ್ಥೆ

## ■ಬೆಸ್ಕಾಂನಿಂದ ನೂತನ ವೆಬ್ ಸರ್ವೀಸ್ ಪೋರ್ಟಲ್ ಸೇವೆ: ಪಂಕಜ್‌ಕುಮಾರ್ ಪಾಂಡೆ

**ಬೆಂಗಳೂರು:** ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವ್ಯಾಪ್ತಿಯಲ್ಲಿ ಹೊಸ ವಿದ್ಯುತ್ ಸಂಪರ್ಕ ಪಡೆಯುವುದು ಅಥವಾ ಇರುವ ಸಂಪರ್ಕ ಸಾಮರ್ಥ್ಯ ಹೆಚ್ಚಿಸುವುದು ಇನ್ನು ಮುಂದೆ ಸುಲಭವಾಗಲಿದೆ.

ಸಂಬಂಧಿಸಿದ ದಾಖಲೆಗಳನ್ನು ಸೇರಿಸಿ, ಅಂತರ್ಜಾಲದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ನೂತನ ವೆಬ್ ಸರ್ವೀಸ್ ಪೋರ್ಟಲ್ (ಡಬ್ಲ್ಯುಎಸ್‌ಎಸ್) ಸೇವೆ ಒದಗಿಸಲು ಬೆಸ್ಕಾಂ ಅಂತಿಮ ಪ್ರಯತ್ನ ನಡೆಸುತ್ತಿದೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಬುಧವಾರ ನಗರದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ಈ ವಿಷಯ ತಿಳಿಸಿದರು.

ಇಷ್ಟು ದಿನ ವಿದ್ಯುತ್ ಗುತ್ತಿಗೆದಾರರ ಮೂಲಕ ಹೊಸ ಸಂಪರ್ಕ ಸೇರಿ ಇನ್ನಿತರ ವಿದ್ಯುತ್ ಕಾರ್ಯಗಳಿಗೆ ಅರ್ಜಿ ಸಲ್ಲಿಸಿ ಸಂಪರ್ಕ ಪಡೆಯಬಹುದಿತ್ತು. ಹೊಸ ಡಬ್ಲ್ಯುಎಸ್‌ಎಸ್ ಸೇವೆಯಲ್ಲಿ ಗುತ್ತಿಗೆದಾರರನ್ನು ಹೊರತುಪಡಿಸಿ ಗ್ರಾಹಕರೇ ನೇರರಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ನಿಗದಿತ ದಾಖಲೆಗಳನ್ನು ಅದರಲ್ಲಿ ಅಪ್‌ಲೋಡ್ ಮಾಡಬಹುದು. ಈ ಅರ್ಜಿಯನ್ನು ವಿಲೇವಾರಿ ಮಾಡುವ ಸಂದರ್ಭದಲ್ಲಿ ಗ್ರಾಹಕರಿಗೆ ಮೊಬೈಲ್ ಮೂಲಕ ಅರ್ಜಿ ಸ್ವೀಕೃತಿಯ ಸಂದೇಶ ತಲುಪಲಿದೆ. ಹೊಸ ವ್ಯವಸ್ಥೆಯಡಿ ಗ್ರಾಹಕರು ತಮ್ಮ ಡಿಪಾಸಿಟ್ ಹಣವನ್ನು ಕೂಡ ವಾಪಸ್ಸು ಪಡೆಯಬಹುದಾಗಿದೆ. ಶೀಘ್ರದಲ್ಲೇ ಈ ಸೇವೆಗೆ ಚಾಲನೆ ನೀಡಲಾಗುವುದು ಎಂದರು.



ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ಬುಧವಾರ ನಗರದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಂಕಜ್‌ಕುಮಾರ್ ಪಾಂಡೆ ಮಾತನಾಡಿದರು. ಸಂಸ್ಥೆಯ ತಲ್ಲಂ ಆರ್ ದ್ವಾರಕನಾಥ್, ಸಂಪತ್‌ರಾಮನ್ ಉಪಸ್ಥಿತರಿದ್ದರು.

ಕಳೆದ ಬಾರಿ ಹೈಟೆಕ್ಷನ್ ವಿದ್ಯುತ್ ಗ್ರಾಹಕರೊಂದಿಗೆ ನಡೆಸಿದ ಸಭೆಯಲ್ಲಿ ವಿದ್ಯುತ್ ಕಡಿತವಾಗುವ ಪೂರ್ವದಲ್ಲಿ ಮುನ್ಸೂಚನೆ ನೀಡುವ ವ್ಯವಸ್ಥೆ ಜಾರಿಗೆ ತರುವಂತೆ ಉದ್ಯಮಿಗಳು ಬೆಸ್ಕಾಂಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಇನ್ನೆರಡು ತಿಂಗಳಲ್ಲಿ ಬೆಸ್ಕಾಂ ಗ್ರಾಹಕರಿಗೆ ಪೂರ್ವ ನಿಗದಿತ ವಿದ್ಯುತ್ ಕಡಿತ ಅಥವಾ ಅನಿಶ್ಚಿತ ವಿದ್ಯುತ್ ಕಡಿತದ ಬಗ್ಗೆ ಚಂದಾದಾರರಾಗುವ ಗ್ರಾಹಕರಿಗೆ ಮೊಬೈಲ್ ಮೂಲಕ ಮಾಹಿತಿ ನೀಡುವ ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ನಿಲುಗಡೆಯಾದ ವಿದ್ಯುತ್, ಪುನಃ ಎಷ್ಟು ಹೊತ್ತಿಗೆ ಬರುವುದೆಂದು ಈ ಅಪ್ಲಿಕೇಶನ್ ತಿಳಿಸಲಿದೆ ಎಂದರು.

ಯಾವ ರೀತಿಯ ಕೈಗಾರಿಕೆಗಳು ಬಂದರೂ ಅವುಗಳಿಗೆ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ಸಿದ್ಧವಿದೆ. ಸರ್ಕಾರಕ್ಕೆ ಅತಿಹೆಚ್ಚಿನ ವಿದ್ಯುತ್ ಶುಲ್ಕ ನೀಡುವ ಉದ್ಯಮದವರನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಲಾಗದು. ಲೋಡ್‌ಶೆಡ್ಡಿಂಗ್ ಪ್ರೊಟೋಕಾಲ್ ಪ್ರಕಾರ ವಿದ್ಯುತ್ ಕಡಿತದ ಸಂದರ್ಭದಲ್ಲಿ ಮೊದಲಿಗೆ ಕೃಷಿ ವಲಯಕ್ಕೆ ಪೂರೈಸಿರುವ ಕರೆಂಟ್ ಸ್ಥಗಿತಗೊಳಿಸಲಾಗುವುದು. ಅತ್ಯಂತ ಕ್ಲಿಷ್ಟಪರಿಸ್ಥಿತಿಯಲ್ಲಿ ಪರ್ಯಾಯ ಮಾರ್ಗವಿಲ್ಲದೆ ಇದ್ದಾಗ ಮಾತ್ರ ಕೊನೆಯ ಹಂತವಾಗಿ ಕೈಗಾರಿಕೆಗಳಿಗೆ ನೀಡಿದ ವಿದ್ಯುತ್ತನ್ನು ಕಡಿತ ಮಾಡಲಾಗುತ್ತದೆ ಎಂದು ಪಾಂಡೆ ಹೇಳಿದರು.

ಮನೆಯ ಛಾವಣಿಗಳಲ್ಲಿ ಉತ್ಪಾದಿಸಿದ ಸೌರವಿದ್ಯುತ್ ಅನ್ನು ಗ್ರಿಡ್‌ಗೆ ಒದಗಿಸುವ ಹಾಗೂ ರೈತರು ಖಾಲಿಯಿರುವ ಭೂಮಿಯನ್ನು ಬಾಡಿಗೆ ಅಥವಾ ಭೋಗ್ಯದ ಆಧಾರದ ಮೇಲೆ ಮಧ್ಯಮ ಪ್ರಮಾಣದ ಸೌರವಿದ್ಯುತ್ ಫಲಕಗಳನ್ನು ನಿರ್ಮಿಸಲು ಉದ್ಯಮಿಗಳಿಗೆ ಅವಕಾಶ ಮಾಡಿಕೊಡುವ ಚಿಂತನ ಬಗ್ಗೆ ಮಾಹಿತಿ ನೀಡಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಆರ್.ಶಿವಕುಮಾರ್, ಸಂಸ್ಥೆಯ ಹಿಂದಿನ ಅಧ್ಯಕ್ಷರು ಪಾಲ್ಗೊಂಡಿದ್ದರು.

Page no - 5

**ಗ್ರಾಹಕ ಸ್ನೇಹಿ** ■ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಬೆಸ್ಕಾಂ ಯೋಜನೆ

# ವಿದ್ಯುತ್ ಸಂಪರ್ಕಕ್ಕೆ ಆನ್‌ಲೈನ್

**ಬೆಂಗಳೂರು:** ಹೊಸ ವಿದ್ಯುತ್ ಸಂಪರ್ಕ ಅಥವಾ ವಿದ್ಯುತ್ ಪ್ರಮಾಣ ಹೆಚ್ಚಳ ಕೋರಿ ಅರ್ಜಿ ಸಲ್ಲಿಸುವ ಆನ್‌ಲೈನ್ ವ್ಯವಸ್ಥೆ ಕಲ್ಪಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಬೆಂಗಳೂರು ವಿದ್ಯುತ್ ಸರಬರಾಜು ನಿಗಮ (ಬೆಸ್ಕಾಂ)ದ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ತಿಳಿಸಿದ್ದಾರೆ.

ಬುಧವಾರ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ(ಎಫ್‌ಕೆಸಿಸಿಐ) ಸದಸ್ಯರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಈ ವಿಷಯ ತಿಳಿಸಿದರು.

ವಿದ್ಯುತ್ ಸಂಪರ್ಕ ಪಡೆಯುವ ವಿಚಾರದಲ್ಲಿ ವಿದ್ಯುತ್ ಗುತ್ತಿಗೆದಾರರು ಸೇರಿದಂತೆ ಇತರೆ ಮಧ್ಯವರ್ತಿಗಳ ಹಾವಳಿ ತಪ್ಪಿಸಿ ನೇರವಾಗಿ ಗ್ರಾಹಕರನ್ನು ತಲುಪುವ ದೃಷ್ಟಿಯಿಂದ 'ವೆಬ್ ಸೆಲ್ಫ್ ಸರ್ವೀಸ್ ಪೋರ್ಟಲ್(ಡಬ್ಲ್ಯೂಎಸ್‌ಎಸ್)' ಆನ್‌ಲೈನ್ ವ್ಯವಸ್ಥೆಯನ್ನು ಶೀಘ್ರದಲ್ಲೇ ಆರಂಭಿಸಲಾಗುವುದು ಎಂದು ಹೇಳಿದರು.

ಇದರಿಂದ ಗ್ರಾಹಕರೇ ನೇರವಾಗಿ ವೆಬ್‌ಪೋರ್ಟಲ್ ಮೂಲಕ ಹೊಸ ಸಂಕರ್ಪ ಅಥವಾ ಹೆಚ್ಚುವರಿ ವಿದ್ಯುತ್‌ಗೆ ಅರ್ಜಿ ಸಲ್ಲಿಸಿ ದಾಖಲೆಗಳನ್ನು ಅಪ್‌ಲೋಡ್ ಮಾಡಬಹುದು. ಅರ್ಜಿ ಸ್ವೀಕೃತಿಯಾದ ಕೂಡಲೇ ಗ್ರಾಹಕರ ಮೊಬೈಲ್‌ಗೆ ಎಸ್‌ಎಂಎಸ್ ಸಂದೇಶ ರವಾನೆಯಾಗುತ್ತದೆ ಎಂದರು.



ಸಂವಾದದಲ್ಲಿ ಪಂಕಜ್ ಕುಮಾರ್ ಪಾಂಡೆ.

ಬೆಸ್ಕಾಂ ಆರಂಭಿಸಲಿರುವ 'ವೆಬ್ ಸೆಲ್ಫ್ ಸರ್ವೀಸ್ ಪೋರ್ಟಲ್'ಗೆ ಗ್ರಾಹಕರೇ ನೇರವಾಗಿ ಹೊಸ ಸಂಕರ್ಪ ಅಥವಾ ಹೆಚ್ಚುವರಿ ವಿದ್ಯುತ್‌ಗೆ ಅರ್ಜಿ ಸಲ್ಲಿಸಿ ದಾಖಲೆ ಅಪ್‌ಲೋಡ್ ಮಾಡಬಹುದು

ಅರ್ಜಿ ಸ್ವೀಕೃತಿಯಾದ ಕೂಡಲೇ ಗ್ರಾಹಕರ ಮೊಬೈಲ್‌ಗೆ ಎಸ್‌ಎಂಎಸ್ ಸಂದೇಶ ರವಾನೆಯಾಗುತ್ತದೆ

**ಲೋಡ್‌ಶೆಡ್ಡಿಂಗ್ ಮಾಹಿತಿಗೆ ಆ್ಯಪ್:** ಲೋಡ್ ಶೆಡ್ಡಿಂಗ್ ಬಗ್ಗೆಯೂ ಕಾಲಕಾಲಕ್ಕೆ ಮಾಹಿತಿ ನೀಡಲು ಇನ್ನೆರಡು ತಿಂಗಳಲ್ಲಿ ಮೊಬೈಲ್ ಅಪ್ಲಿಕೇಷನ್ ವ್ಯವಸ್ಥೆ ಜಾರಿಗೆ ತರುವುದಾಗಿ ಅವರು ಇದೇ ವೇಳೆ ಹೇಳಿದರು. ಗ್ರಾಹಕರು ಬೆಸ್ಕಾಂ ಹೊರತರಲಿರುವ ನಿಗದಿತ ಮೊಬೈಲ್ ಅಪ್ಲಿಕೇಷನ್‌ನಲ್ಲಿ ನೋಂದಣಿ ಪಡೆದರೆ ವಿದ್ಯುತ್ ಕೊರತೆ ವೇಳೆ ಆಗುವ ಅಧಿಕೃತ ಹಾಗೂ ಅನಧಿಕೃತ ಲೋಡ್ ಶೆಡ್ಡಿಂಗ್ ಬಗ್ಗೆ ಮೊದಲೇ ಮಾಹಿತಿ ದೊರೆಯುತ್ತದೆ ಎಂದು ತಿಳಿಸಿದರು.

ಸಂವಾದದಲ್ಲಿ ಎಫ್‌ಕೆಸಿಸಿಐ ಉಪಾಧ್ಯಕ್ಷ ಎಸ್. ಸಂಪತ್ ಕುಮಾರ್, ಮುಖ್ಯ ವಿದ್ಯುತ್ ಪರಿವೀಕ್ಷಕ ಡಿ.ಎಚ್. ಬಸವರಾಜು, ಇಂಧನ ಮತ್ತು ನವೀಕರಿಸಬಹುದಾದ ಇಂಧನ ಸಮಿತಿ ಅಧ್ಯಕ್ಷ ರಮೇಶ್ ಶಿವಣ್ಣ ಇತರರು ಉಪಸ್ಥಿತರಿದ್ದರು.